# MYSORE LEGISLATIVE ASSEMBLY.

## TWENTIETH DAY.

*Wednesday, 16th March 1955.*

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

### Re: Survey Settlement.

*Q.*—308. **Sri G. SIVAPPA** (Holalkere).—

Will the Government be pleased to state :—

(*a*) whether they have commenced re-survey settlement in the State ;

(*b*) the part of the State in which they are working ;

(*c*) the proposed expenditure of the re-survey settlement ;

(*d*) the progress of the work ;

(*e*) whether they have provided necessary trained men and equipment ?

*A.*—**Sri Kadidal MANJAPPA** (Minister for Revenue and Public Works).—

(*a*) Yes.

(*b*) The II Revision Settlement work has been taken up in Hiryur and Hosadurga Taluks in the Chitaldrug District.

(*c*) A sum of Rs. 50,000 is provided in the current year's Budget.

(*d*) Preliminary works, such as land revenue, phodi and akarband dura sthi, etc., relating to II Revision Settlement have been taken up prelude to I Revision Settlement work.

(*e*) Yes.

ಶ್ರೀ ಜಿ. ಶಿವಪ್ಪ.—ಸಂಸ್ಥಾನಾಮಳಿ ಇದೆಲ್ಲಾ ಮುಗಿಯುವುದಕ್ಕೆ ಎಷ್ಟು ವರ್ಷ ಬೇಕಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಐದಾರುವರ್ಷ ಗಳಾಗಬಹುದೆಂದು ಕಾಣುತ್ತದೆ.

ಶ್ರೀ ಜಿ. ಶಿವಪ್ಪ.—ಅದಕ್ಕೆ ಸಾಕಾದಷ್ಟು ಸಿಬ್ಬಂದಿ ವಗ್ಯೆರೆಯನ್ನು ಇನ್ನೂ ಕೊಟ್ಟಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಿರುವಷ್ಟು ಮಟ್ಟಿಗೆ ಸಿಬ್ಬಂದಿ ಕೊಟ್ಟಿದೆ.

ಶ್ರೀ ಜಿ. ಶಿವಪ್ಪ.—ಅಲ್ಲಿಗೆ ಹೊಸದಾಗಿ ಆಗತಾನೆ ಪಾಸಾಗಿರುವ ಅನುಭವವಿಲ್ಲದ ವಿದ್ಯಾರ್ಥಿಗಳನ್ನು ಹಾಕಿರುವುದರಿಂದ ಕೆಲಸ ಸಮರ್ಪಕವಾಗಿ ಆಗುತ್ತಿಲ್ಲ ವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೊಸಬರೂ ಇದ್ದಾರೆ, ಹಳಬರೂ ಇದ್ದಾರೆ.

ಶ್ರೀ ಜಿ. ಶಿವಪ್ಪ.—ಅದನ್ನು ಪ್ರಾರಂಭಮಾಡಿ ಎಷ್ಟು ದಿವಸವಾಯಿತು ?

**Sri Kadidal MANJAPPA.**—I think it is in the month of January or February, I don't exactly remember.

ಶ್ರೀ ಜಿ. ಶಿವಪ್ಪ.—ಸರ್ಕಾರದವರೇನಾದರೂ ಅವರಿಗೆ ಈ ರೀತಿಯಾಗಿ ಮಾಡಬೇಕೆಂದು ಹೇಳಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ರೂಲ್ಸ್‌ಪ್ರಕಾರ ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಜಿ. ಶಿವಪ್ಪ.—ಜಮೀನು ಕಂದಾಯವನ್ನು ಗೊತ್ತುಮಾಡುವುದರಲ್ಲಿ ಯಾವರೀತಿ ಮಾಡಬೇಕೆಂದು ಹೇಳಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಸೆಟಲ್‌ಮೆಂಟ್ ವಿಚಾರದಲ್ಲಿ ಸ್ಪಷ್ಟವಾದ ನಿಬಂಧನೆಗಳಿವೆ. ಆ ನಿಬಂಧನೆಗಳ ಪ್ರಕಾರ ಅವರು ಕೆಲಸ ಮಾಡುತ್ತಾರೆ.

ಶ್ರೀ ಜಿ. ಶಿವಪ್ಪ.—ಯಾವಾಗಲೂ ಶೇಕಡ ಇಪ್ಪತ್ತೈದಕ್ಕಿಂತಲೂ ಹೆಚ್ಚಿಗೆ ಜಮೀನು ಕಂದಾಯವನ್ನು ಏರಿಸಕೂಡದೆಂದು ಇರುವ ನಿಬಂಧನೆಯನ್ನು ಸರ್ಕಾರದವರು ಗಮನಿಸುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಿಬಂಧನೆ ಇರುವುದನ್ನು ಸರ್ಕಾರದವರು ಅನುಸರಿಸುತ್ತಾರೆ.

ಶ್ರೀ ಜಿ. ಶಿವಪ್ಪ.—ಹತ್ತಿಪ್ಪತ್ತು ವರ್ಷಗಳಿಂದ unauthorised ಆಗಿ ಸಾಗುವಳಿ ಮಾಡುತ್ತಿರುವ ಜಮೀನುಗಳಿದ್ದರೆ, ಅಂಥ ವಿಷಯಗಳಲ್ಲಿ ಏನುಮಾಡಬೇಕೆಂದು ಹೇಳಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಏನೂ ಮಾಡುವುದಕ್ಕಾಗುವುದಿಲ್ಲ. ಅವರು ಅಳತೆಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುತ್ತಾರೆ. ಆ ಅಧಿಕಾರಿಗಳು ಸಂದರ್ಭಾನುಸಾರ ತೀರ್ಮಾನ ತೆಗೆದುಕೊಳ್ಳುತ್ತಾರೆ.

ಶ್ರೀ ಜಿ. ಶಿವಪ್ಪ.—ಇಬ್ಬರು ಏಕೆ ? ಒಬ್ಬರು ಸರ್ವೇ ಸೂಪರ್‌ಇಂಟೆಂಡೆಂಟರೇ ಈ ಕೆಲಸಗಳನ್ನೆಲ್ಲಾ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ವೆ ಇಲಾಖೆಯ್ಯ ಬಹಳ ಕೆಲಸ ಕಾರ್ಯಗಳಾಗಬೇಕಾಗಿದೆ. Staff ಕಡಮೆ, ಮಾಡಬೇಕಾದ ಕೆಲಸ ವಿಪರೀತ ಇದೆ. ಇನಾಂ ಗ್ರಾಮಗಳ ಸರ್ವೆಮಾಡುವುದೂ ದರಖಾನು, ಮೂಲಕ ವಿಲೇವಾರಿಗೆ ಜಮೀನು ಸರ್ವೆ ಮಾಡುವುದೂ ಅವರಿಗೇ ಸೇರಿದೆ. ಆದ್ದರಿಂದ ಹೆಚ್ಚಿಗೆ ಸಿಬ್ಬಂದಿಯ ಅವಶ್ಯಕತೆ ಇದೆ.

**Sri G. SIVAPPA.**—Who is superior ?

**Sri Kadidal MANJAPPA.**—Both of them.

ಶ್ರೀ ಜಿ. ಶಿವಪ್ಪ.—Detailed Survey ಯನ್ನು ಈಗ ಹತ್ತು ವರ್ಷಗಳ ಮುಂಚೆಯೇ ಮಾಡಿರುವುದರಿಂದ, ಈಗ Detailed Survey ಪುನಃ ಮಾಡುವುದು ಅನಾವಶ್ಯಕ. ಆದ್ದರಿಂದ ಅದಷ್ಟು ಬಾಗ್ಯತೆ ಮಾಡಿ ಸಂಸ್ಥಾನಾಮಳಿ 2-3 ವರ್ಷಗಳಲ್ಲೇ ಮುಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಮಾತ್ರ ಸರ್ವೆ ಮಾಡಿದೆ.

ಶ್ರೀ ಜಿ. ದುಗ್ಗಪ್ಪ.—ಚಿತ್ರದುರ್ಗದಲ್ಲಿ ಒಂದು additional ಸೂಪರಿಂಟೆಂಡೆಂಟರ ಆಫೀಸನ್ನು ಮಾಡಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿದೆ.

ಶ್ರೀ ಜಿ. ದುಗ್ಗಪ್ಪ.—ಅಲ್ಲಗೆ ಸಾಕಾದಷ್ಟು ಸಿಬ್ಬಂದಿ ಮತ್ತು ಸಾಮಾನುಗಳನ್ನು ಒದಗಿಸಿ ಕೊಟ್ಟಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಒದಗಿಸುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ಈ ರೀತಿ ಇನ್ನೂ ಒದಗಿಸಿಲ್ಲವಾದ್ದರಿಂದ ಕೆಲಸ ಕಾರ್ಯಗಳು ನಡೆಯುವುದು ಬಹಳ ನಿಧಾನವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಪೀಠಿಕಾ ರೂಪವಾಗಿ ಕೆಲಸ ನಡೆದಿದೆ. ಹತ್ತು ಜನ ಸೂಪರ್‌ವೈಜರ್‌ಗಳು ಮತ್ತು ಐವತ್ತು ಜನ ಸರ್ವೇಯರುಗಳು ಕೆಲಸ ಮಾಡುತ್ತಿದ್ದಾರೆ. ಇನ್ನೂ ಕೆಲವು ಸರ್ವೇಯರುಗಳನ್ನು ಕಳುಹಿಸುವುದರಲ್ಲಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಇನ್ನೂ ಕೆಲವು ಜನ ಬೇಕಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬೇಕು. ಕಳುಹಿಸುತ್ತೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—Encroachments ವಿಚಾರವನ್ನೂ ಈಗಲೇ ತೀರ್ಮಾನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವ ಯಾವ ಇಲಾಖೆಗೆ ಸಂಬಂಧಪಟ್ಟಂತೆ re-settlement ಮಾಡುತ್ತಾರೋ, ಅದರ ಜೊತೆಯಲ್ಲೇ encroachmentನ್ನೂ ಗಮನಕ್ಕೆ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—Evictionನ್ನು ಕೂಡ ಆಗಲೇ ಮಾಡುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ —Eviction ಮಾಡುವವರು ರೆವಿನ್ಯೂ ಅಧಿಕಾರಿಗಳು. ಆ ಬಗ್ಗೆ ಅವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಬೌಂಡರಿಯನ್ನು ಗೊತ್ತುಪಡಿಸಿದಮೇಲೆ, ಜೊತೆಯಲ್ಲೇ eviction ನ್ನಿಗೂ ಒಕೆ ಕಾರ್ಯಕ್ರಮ ತೆಗೆದುಕೊಳ್ಳಕೂಡದು ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಒಂದೇ ರೀತಿಯಾಗಿ ಹೇಳುವುದು ಕಷ್ಟ. ಯಾವುದಾದರೂ ಸಂದರ್ಭದಲ್ಲಿ ಕೇವಲ ಎರಡು-ಮೂರು ಗುಂಟೆಗಳಷ್ಟು ತೆಗೆದುಕೊಂಡಿರಬಹುದು. ಅಂಥ ಸಂದರ್ಭದಲ್ಲಿ eviction ಮಾಡಬೇಕೆಂದು ಹೇಳುವುದು ಸೂಕ್ತವಲ್ಲ.

ಶ್ರೀ ಜಿ. ಬಸಪ್ಪ.—ಉತ್ತರದಲ್ಲಿ revision settlement work ಎಂದು ಹೇಳಿದ್ದೀರಿ. ತಾವು ಮಾಡುತ್ತಿರುವುದು revision settlement ಎಂತಲೇ, re-classification ಎಂತಲೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದರಲ್ಲ ಎರಡೂ ಬರುತ್ತಿದೆ.

ಶ್ರೀ ಜಿ. ಬಸಪ್ಪ.—ಪ್ರತಿಯೊಂದು ಸರ್ವೇ ನಂಬರನ್ನೂ ಮಾಡುತ್ತಿದ್ದೀರೋ ಅಥವಾ ಕೆಲವು ತೋಟಗಳನ್ನು ಮಾತ್ರ ಮಾಡುತ್ತಿದ್ದೀರೋ ?

ಶ್ರೀ ಕಡಿದಾಳ್ ಮಂಜಪ್ಪ.—Delailed survey ಮಾಡುವುದಿಲ್ಲ. ಎಲ್ಲಿ ಹೊಸದಾಗಿ encroachments ಆಗಿದೆ ಅಥವಾ ಹೊಸದಾಗಿ ನೀರಾವರಿಗೆ ಬಂದಿದೆ, ಅಲ್ಲಿ ಮಾಡಿದೆ.

ಶ್ರೀ ಜಿ. ಬಸಪ್ಪ.—ಸಿಬ್ಬಂದಿಯ ಜೊತೆಗೆ ಕೆಲವು ರಿಜಿಸ್ಟರ್ ಆಗಿರುವ ಆಫೀಸರುಗಳನ್ನೂ ತೆಗೆದುಕೊಂಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವರನ್ನು ತೆಗೆದುಕೊಂಡಿದ್ದಾರೆ.

ಶ್ರೀ ಜಿ. ಬಸಪ್ಪ.— ಸಾಕಷ್ಟು ಸಿಬ್ಬಂದಿಯಿಲ್ಲವೆಂದೇ ಅಥವಾ ದಕ್ಷತೆಯಿಲ್ಲವೆಂದೇ ?

ಶ್ರೀ ಕಡಿದಾಳ್ ಮಂಜಪ್ಪ.—ಅನುಭವಸ್ಥರ ಸಹಾಯಬೇಕೆಂದು ಮಾಡಿದೆ.

ಶ್ರೀ ಜಿ. ಬಸಪ್ಪ.— ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಮಳೆಗಾಲದಲ್ಲಿ ಹೆಚ್ಚಿಗೆ ಕೆಲಸವಿಲ್ಲದೆ ಇವರುಗಳು ಸುಮ್ಮನೆ ಇರುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಳೆಗಾಲದಲ್ಲಿ ಸರ್ವೆ ಕೆಲಸವೇನೋ ಹೆಚ್ಚಿಗೆ ಇರುವುದಿಲ್ಲ. ಅವರಿಗೆ ಬೇರೆ ಕೆಲಸಗಳಿರುತ್ತವೆ.

ಶ್ರೀ ಜಿ. ಬಸಪ್ಪ.—ಅಂಥ ಸಂದರ್ಭದಲ್ಲಿ ಅವರನ್ನು ಸರ್ವೆ ಸೆಟಲ್‌ಮೆಂಟ್ ಕೆಲಸಕ್ಕೆ ಉಪಯೋಗಿಸಿಕೊಳ್ಳುವುದಕ್ಕಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬೇರೆ ಕೆಲಸಗಳು ಬೇಕಾದಷ್ಟಿವೆ. ಅವನ್ನೆಲ್ಲಾ ಈಗ ಹೇಳಬೇಕಾಗಿಲ್ಲ.

ಶ್ರೀ ಜಿ. ಬಸಪ್ಪ.—ಸರ್ವೆ ಮಾಡುವ ಜನರು ಹಳ್ಳಿಗಳಿಗೆ ಹೋಗಿ ಜನರನ್ನು ದುಡ್ಡು ಕೊಡಬೇಕು, ಇಲ್ಲದಿದ್ದರೆ ಒಂದಕ್ಕೆ ಮೂರರಷ್ಟು ಕಂದಾಯ ಹಾಕುತ್ತೇವೆಂದು ಹೇಳಿ ಹೆದರಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಅಂಥ ಸಂದರ್ಭವನ್ನು ನಮ್ಮ ಗಮನಕ್ಕೆ ತಂದರೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಭೀಮಪ್ಪನಾಯಕ್.—ಈ occasion ನನ್ನು ಉಪಯೋಗಿಸಿಕೊಂಡು soil surveyಯನ್ನು ಕೂಡ ಮಾಡುವುದರಿಂದ ಉಪಯೋಗವಾಗುವುದಿಲ್ಲವೆ ? By adding some chemist to this Department and going on with the soil survey, cannot some scientific method of levying land revenue be done ?

**Sri Kadidal MANJAPPA.**—I will consider the suggestion of the Hon'ble Member.

ಶ್ರೀ ಆರ್. ಮುನಿಸ್ವಾಮಯ್ಯ.—ಪೋಜಿನಿದಾರರಿಗೆ soilನ್ನು ಪರೀಕ್ಷೆ ಮಾಡುವ ವಿಚಾರವನ್ನು ಹೇಳಿ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ soil ಪರೀಕ್ಷೆ ವಿಚಾರವೂ ಗೊತ್ತಿರುತ್ತದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗಾದರೆ ಎಲ್ಲೆಲ್ಲಿ ರಿ-ಕ್ಲಾಸಿಫಿಕೇಷನ್ ಮಾಡಬೇಕಾಗಿದೆಯೋ ಅಲ್ಲಿ ಅವರು re-classification ಕೂಡ ಮಾಡುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ರಿ-ಕ್ಲಾಸಿಫಿಕೇಷನನ್ನು ಕೂಡ ಮಾಡುತ್ತಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸಂಸ್ಥಾನಾಮಳಿ ರೀ-ಸರ್ವೆ ಮಾಡಿದರೆ ಕಂದಾಯ ಜಾಸ್ತಿ ಬರುತ್ತದೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬರಬಹುದೆಂದು ಊಹೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಯಾವಾಗ ಪೂರ್ತಿ ಮಾಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡುತ್ತಿದ್ದೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪ್ರೋಜಿನಿದಾರರಿಗೆ ತರಪೇತು ಕೊಡುವುದು ಅಳತೆಮಾಡುವುದು ಮಾತ್ರ ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನಿನ ರಿ-ಕ್ಲಾಸಿಫಿಕೇಷನ್ನನ್ನು ಮಾಡುವುದಕ್ಕೆ ಹೇಳಿದರೂ ಮಾಡುತ್ತಾರೆ, ಅಳತೆ ಮಾಡುವುದಕ್ಕೆ ಹೇಳಿದರೂ ಮಾಡುತ್ತಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—Classification ವಿಷಯ ಏನಿದ್ದರೂ ನೀರಾವರೀ ಸೌಕರ್ಯ ಈಚೆಗೆ ಕಲ್ಪನೆಯಾಗಿದೆಯಲ್ಲಾ ಅಲ್ಲಿ ಬರುತ್ತದೆ. ಆದ್ದರಿಂದ ಇವರಿಗೆ soil survey ವಿಷಯ ತಿಳಿದಿರುತ್ತಿದೆಯೇ ಎಂದು ಕೇಳುತ್ತಿದ್ದೇನೆ. ಅವರಿಗೆ ತರಪೇತು ಕೊಟ್ಟಿರುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೂ ತಿಳಿದಿರುತ್ತದೆ.

---

## Acquisition of lands at Melapura as Anti-Malarial Measure.

*Q.*—318. **Sri K. PUTTASWAMY** (Srirangapatna).—

Will the Government be pleased to state :—

(*a*) whether it has come to their notice that the villagers of Melapura of Srirangapatna Taluk have been requesting for acquisition of wet lands very close to the village as an anti-malarial measure;

(*b*) the steps that have been taken by Government to give them relief ?

*A.*—**Sri Kadidal MANJAPPA** (Minister for Revenue and Public Works).—

(*a*) No.

(*b*) Does not arise.

**Sri K. PUTTASWAMY.**—Has it come to the notice of Government that the village Melapura is a malarial village ?

**Sri Kadidal MANJAPPA.**—I do not know, Sir.

**Sri K. PUTTASWAMY.**—Has the Government come to know that this village is sorrounded all round by wet-land and the village itself is situate at a lower level ?

**Sri Kadidal MANJAPPA.**—May be Sir, I have no information

---

## Acquisition of land in Chandagal Village for Gomal.

*Q.*—321. **Sri K. PUTTASWAMY** (Srirangapatna).—

Will the Government be pleased to state :—

(*a*) whether there are any representations by the people of Chandagal Village of Krishnarajanagar Taluk for acquisition of agricultural land for purposes of gomal;

(*b*) whether they have promised to consider the same, if the villagers deposited the costs of the acquisition thereof;

(*c*) whether it is their policy to acquire agricultural lands if they are needed for gomal;

(*d*) whether there are any instances of such an acquisition;

(*e*) whether it has come to their notice that the gomal of the village was released and granted for cultivation a few years back;

(*f*) whether it has come to their notice that the above acquisition is asked for with a view to put the occupant of the land to loss ?

*A.*—**Sri Kadidal MANJAPPA** (Minister for Revenue and Public Works).—

(*a*) Yes.

(*b*) Yes.

(*c*) If there is dire necessity for gomal, there is nothing wrong in acquiring agricultural lands in deserving cases, provided the villagers are prepared to meet the cost.

(*d*) Information is not readily available.

(*e*) No.

(*f*) No.

**Sri K. PUTTASWAMY.**—May I know, Sir, what is the strength of the cattle of that village ?

**Sri Kadidal MANJAPPA.**—I want notice please.

**Sri K. PUTTASWAMY.**—May I know what is the extent of reserve assessed waste land ?

**Sri Kadidal MANJAPPA.**—According to the report of the Deputy Commissioner, the gomal is very inadequate and the village deserves some more gomal.